

ವರರುಚಿಯ 'ಶೃಂಗಾರಾದ್ಭುತ ಘುರಿ ಚಿತ್ರ ಬೃಹತ್ಕಥಾ ಮಂಜರಿ' ಕಥಾಸಂಗ್ರಹದಿಂದ ಬಂದವರಿದ್ದಿರಬಹುದೇ ಎನಿಸುತ್ತದೆ. ಎಲ್ಲಿಯೋ ಯಾವ ಮೂಲದಲ್ಲಿಯೋ ಹುಟ್ಟಿಕೊಳ್ಳುವ ಈ ಪುರಾಣ ಮೂಲದ ಕಥೆಗಳು ತಮ್ಮ ಊರು, ಕೇರಿ, ವಿಳಾಸ, ರೂಪಗಳನ್ನು ಬದಲಿಸಿಕೊಳ್ಳುತ್ತ ಆದರೂ ಮೂಲ ರಚನಾ ರೇಖೆಯನ್ನು ಬಿಟ್ಟುಕೊಡದೆ ಬಹುರೂಪವನ್ನು ಪಡೆಯುತ್ತ ನಿರಂತರ ವಲಸೆ ಹೋಗುವುದು ಮಾತ್ರ ಅಧ್ಯಯನ ಯೋಗ್ಯವೆನಿಸುತ್ತದೆ. ಈ ಕ್ರಮದಲ್ಲಿ ಸ್ತ್ರೀ ಪಾತ್ರಗಳ ಬಹುರೂಪಗಳನ್ನು ಲಕ್ಷ್ಮೀಶ ಮನೋಜ್ಞವಾಗಿ ನಿರೂಪಿಸುವ ಕಾರಣಕ್ಕೇ ಈ ಕೃತಿ ಕುತೂಹಲ ಕಾಯ್ದುಕೊಳ್ಳುವ ಓದಿನ ಕಾವ್ಯವಾಗಿರುತ್ತದೆ. ಇದರೊಂದಿಗೆ ಜೈಮಿನಿ ಭಾರತದ ಎಲ್ಲ ಕಥೆಗಳು ಒಂದಕ್ಕೊಂದು ವಿರುದ್ಧ ಮುಖದಲ್ಲಿದ್ದು ಅವೆಲ್ಲದರ ಒಟ್ಟು ಆಶಯದಂತೆ ದುಷ್ಟಬುದ್ಧಿ ಎಂಬುವನು ಎಷ್ಟೇ ತಂತ್ರ ಹೂಡಿದರೂ ನಾಶವಾಗದೆ, ಸಾಯದೆ ಬದುಕಿಬಿಟ್ಟ ಚಂದ್ರಹಾಸನ ವಿಧಿಬಲದ ಕಥೆಯಿಂದ ಕಾವ್ಯ ಕೊನೆಯಾಗುತ್ತದೆ.

ಇನ್ನು ಲಕ್ಷ್ಮೀಶನ ಶಬ್ದ ಭಂಡಾರದ ವಾಗಾಡಂಬರ, ಪ್ರಾಸಮಯ ಶೈಲಿ, ಅಲ್ಲೇ ಅವನು ತರುವ ಶ್ಲೇಷೆ ಇವು ಒಮ್ಮೊಮ್ಮೆ ಕ್ಲಿಷ್ಟವೆನಿಸಿದರೂ, ಪುನರಾವರ್ತನೆಯ ಕ್ಲೀಷೆ ಎನಿಸಿದರೂ ಅದೇ ಗ್ರಾಮೀಣರ ಪಾಂಡಿತ್ಯ ಪರೀಕ್ಷೆಯ ಅರ್ಹತಾ ಪತ್ರವಾಗಿದ್ದಿತು. ಷಡಕ್ಷರ ಕವಿಯ ರಾಜಶೇಖರ ವಿಳಾಸ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಷ್ಮೀಶನ ಜೈಮಿನಿ ಭಾರತ ಇವು ಗ್ರಾಮೀಣ ಪಂಡಿತರ ಪಾಂಡಿತ್ಯ ಪರೀಕ್ಷೆಯ ಒರೆಗಲ್ಲುಗಳು. ಯಾವುವು ಇಂದು ವಿಶ್ವವಿದ್ಯಾನಿಲಯ ಮತ್ತು ಪದವಿ ತರಗತಿಗಳ ಪ್ರಾಧ್ಯಾಪಕರಿಗೆ 'ಇದು ಹಳಗನ್ನಡ ಬಿಡಿಸಿ ಓದಿ ವ್ಯಾಖ್ಯಾನ ಮಾಡಲಾಗದು' ಎಂದಾಗಿಬಿಟ್ಟಿದೆಯೋ ಅದೇ ಗ್ರಾಮೀಣ ಗಮಕಿಗಳಿಗೆ, ಬಯಲಾಟದವರಿಗೆ, ಯಕ್ಷಗಾನದವರಿಗೆ ಪದವಿಗಳಾಗಿದ್ದವು. ಹೀಗಾಗಿ ಗ್ರಾಮೀಣ ಜಂಗಮ ಜನಾರ್ದನರು ಕುಮಾರವ್ಯಾಸನನ್ನು ಅದೆಷ್ಟು ಓದಿನ ಪ್ರೀತಿಯಿಂದ ಸ್ವೀಕರಿಸಿದ್ದಾರೋ ಅಷ್ಟೇ ಪಾಂಡಿತ್ಯ ಮತ್ತು ತಿಳಿವಳಿಕೆಯ ಹೆಮ್ಮೆಯಿಂದ ಲಕ್ಷ್ಮೀಶನನ್ನು ತಂತಮ್ಮ ಮನೆ–ಮನಗಳಲ್ಲಿರಿಸಿಕೊಂಡಿದ್ದಾರೆ.


**ಕೃಷ್ಣಮೂರ್ತಿ ಹನೂರು**

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಇಂಗ್ಲಿಷ್‌ಗೆ ಅನುವಾದಗೊಂಡಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಕುಮಾರವ್ಯಾಸನ ಕುರಿತಾದ ದೀರ್ಘ ಪ್ರಸ್ತಾವನೆ, ಅವನ ಕಾವ್ಯ ಪದ್ಯಸಂಗ್ರಹ ಮತ್ತು 50 ವಿಶೇಷ ಚಿತ್ರಗಳಿರುವ 'ಕುಮಾರವ್ಯಾಸ ಭಾರತ ಕಥಾಸಂಗ್ರಹ' ಕೃತಿಯನ್ನು ಶಿವಮೊಗ್ಗದ ಅಹರ್ನಿಶಿ ಪ್ರಕಾಶನ ಪ್ರಕಟಿಸಲಿದೆ.